# ವಾರ್ತಾ ವಿಶ್ಲೇಷಣೆ

## ಅಮೆರಿಕದಲ್ಲಿ ಭಾರತೀಯರು

ಸ್ವಾಮಿ ವಿವೇಕಾನಂದರು ಮೊಟ್ಟಮೊದಲ ಬಾರಿಗೆ ಅಮೆರಿಕ ದೇಶಕ್ಕೆ ಹೋದಾಗ ಅಲ್ಲಿಯ ಜನರು ಅವರನ್ನು 'ಕರಿಯರು' ಎಂದು ತಿರಸ್ಕಾರದಿಂದ ಕಂಡಿದ್ದರು. ಭಾರತೀಯರನ್ನು ಅವರು ತುಂಬ ಅನಾಗರಿಕರೆಂದು ಪರಿಗಣಿಸುತ್ತಿದ್ದರು. ಭಾರತೀಯರಿಗೆ ತಮ್ಮದೇ ಆದ ಒಂದು ಸಂಸ್ಕೃತಿ ಮತ್ತು ಧರ್ಮ ಇದೆ ಎಂಬ ಕಲ್ಪನೆಯೂ ಅವರಿಗಿರಲಿಲ್ಲ. ಭಾರತೀಯರು ಅತ್ಯಂತ ಅನೈತಿಕ, ಕ್ರೂರ, ಬರ್ಬರ ಜನಾಂಗ ಎಂದು ಅವರು ಭಾವಿಸಿದ್ದರು. ಸ್ವಾಮಿ ವಿವೇಕಾನಂದರು ಈ ತಪ್ಪು ಕಲ್ಪನೆಗಳನ್ನೆಲ್ಲ ಹೋಗಲಾಡಿಸಿ ಭಾರತೀಯ ಸಂಸ್ಕೃತಿಯ ಮತ್ತು ಧರ್ಮದ ಹಿರಿಮೆಯನ್ನು ಅಲ್ಲಿ ಸಾರಿದರು.

ಈಗ ಒಂದು ನೂರು ವರ್ಷಗಳ ನಂತರ ಪರಿಸ್ಥಿತಿ ಬದಲಾಗಿದೆ. ಪಶ್ಚಿಮ ದೇಶದವರಿಗೆ ಆಧ್ಯಾತ್ಮಿಕ ಭಾವನೆಗಳನ್ನು ದಾನಮಾಡಿ ಅವರಿಂದ ವಿಜ್ಞಾನ ತಾಂತ್ರಿಕತೆಗಳನ್ನು ಕಲಿತುಕೊಳ್ಳಿ ಎಂದು ಭಾರತೀಯರಿಗೆ ಸ್ವಾಮೀಜಿ ಕರೆ ನೀಡಿದ್ದರು. ಆದರೆ ಈಗ ಭಾರತೀಯರು ಎರಡೂ ಕ್ಷೇತ್ರಗಳಲ್ಲಿ ಅವರಿಗೆ ಗುರುವಾಗುತ್ತಿದ್ದಾರೆ. ಈಗ ಅಮೆರಿಕದಲ್ಲಿರುವ ಭಾರತೀಯರ ಸಂಖ್ಯೆ ೭,೨೨,೦೦೦. ಮೆಕ್ಸಿಕೊ ಮತ್ತು ಫಿಲಿಪ್ಪೈನ್ ದೇಶದವರಿಗೆ ಹೋಲಿಸಿದರೆ ಈ ಸಂಖ್ಯೆ ಕಡಿಮೆಯೆ. ಆದರೆ ಭಾರತೀಯರು ಅಲ್ಲಿ ಎಲ್ಲ ಕ್ಷೇತ್ರಗಳಲ್ಲಿ ಮೈಲುಗೈ ಸಾಧಿಸುತ್ತಿದ್ದಾರೆ. ಭಾರತೀಯರು ೫೦೦ ಫಾರ್ಚೂನ್ ಕಂಪನಿಗಳನ್ನು ನಿರ್ವಹಿಸುತ್ತಿದ್ದಾರಂತೆ. ಸಿಲಿಕನ್ ವ್ಯಾಲಿಯಲ್ಲಿರುವ ಅತಿ ದೊಡ್ಡ ಕಂಪನಿಯೊಂದರಲ್ಲಿ ಶೇಕಡ ೪೦ರಷ್ಟು ಭಾರತೀಯ ಮೂಲದವರು ಕೆಲಸ ಮಾಡುತ್ತಿದ್ದಾರೆ. *NASA*ದಲ್ಲಿ ಶೇ. ೩೬ರಷ್ಟು ಭಾರತೀಯರು ಉದ್ಯೋಗನಿರತರಾಗಿದ್ದಾರೆ. ಅಲ್ಲಿಯ ಶೇ.೩೮ರಷ್ಟು ವೈದ್ಯರು ಭಾರತೀಯರಂತೆ. ಅಲ್ಲಿಗೆ ವಲಸೆಹೋದವರ ಪೈಕಿ ಭಾರತೀಯರ ತಲಾ ಆದಾಯವೆ ಅತ್ಯಧಿಕವಂತೆ. ಅಲ್ಲಿಯ ಕೆಲವು ಪ್ರತಿಷ್ಠಿತ ಕಂಪನಿಗಳ ಮಾಲಿಕರು ಭಾರತೀಯರು. ವಿಶೇಷ ಹುದ್ದೆಗಳಿಗಾಗಿ ನೀಡುವ *HIB* ವೀಸಾಗಳಲ್ಲಿ ಶೇ.೨೦ರಷ್ಟನ್ನು ಭಾರತೀಯರೇ ಗಿಟ್ಟಿಸಿಕೊಳ್ಳುತ್ತಾರಂತೆ. ಬೇರೆ ದೇಶದವರಿಗೆ ಹೋಲಿಸಿದರೆ ಈ ಸಂಖ್ಯೆ ಅತ್ಯಧಿಕ. ದೇಶದ ಆರನೆಯ ಅತಿದೊಡ್ಡ *US Airways*ನ ಮುಖ್ಯ ಕಾರ್ಯ ನಿರ್ವಾಹಕರಾದ ರಾಕೇಶ ಗಂಗ್ವಾಲ್ ಹೇಳುತ್ತಾರೆ: 'ಅಮೆರಿಕದ ಬೇರೆ ಯಾವುದೇ ಜನಾಂಗದವರಿಗೆ ಹೋಲಿಸಿದರೆ ಭಾರತೀಯರು ಕಡಮೆ ಅವಧಿಯಲ್ಲಿ ಅಧಿಕ ಯಶಸ್ಸನ್ನು ಪಡೆಯುತ್ತಾರೆ.' ಹಿಂದೆ ಅಮೆರಿಕದಲ್ಲಿ ಚೀನಾದ ರಾಯಭಾರಿಯಾಗಿದ್ದ ಹು ಶಿಹ್ ಹೇಳಿದ್ದಾರೆ : 'ಭಾರತವು ಒಬ್ಬನೇ ಸೈನಿಕನನ್ನೂ ಕಳಿಸದೆ ೨೦ ಶತಮಾನಗಳವರೆಗೆ ಸಾಂಸ್ಕೃತಿಕವಾಗಿ ಚೀನಾವನ್ನು ಆಕ್ರಮಿಸಿ ಪ್ರಭುತ್ವವನ್ನು ಸಾಧಿಸಿತು.' ಈಗ ಅದೇ ಭಾರತ ಅಮೆರಿಕವನ್ನು ಆಕ್ರಮಿಸಲು ಮುಂದಾಗಿರುವಂತೆ ಕಾಣುತ್ತಿದೆ. 'ಭಾರತ ಜಗತ್ತನ್ನೇ ಗೆಲ್ಲುವುದು' ಎಂಬ ಸ್ವಾಮಿ ವಿವೇಕಾನಂದರ ಭವಿಷ್ಯವಾಣಿಯನ್ನು ಈ ಬೆಳವಣಿಗೆಗಳು ಪುಷ್ಟಿಗೊಳಿಸುತ್ತಿವೆ.

## ಮಾನವ ಸ್ಮೃತಿ

ಅತ್ಯಂತ ಕ್ಷುದ್ರ ಪ್ರಾಣಿಯಿಂದ ಹಿಡಿದು ಮಾನವನವರೆಗೆ ಎಲ್ಲ ಜೀವಿಗಳಲ್ಲಿಯೂ ಸ್ಮೃತಿಶಕ್ತಿ ಇದೆ. ಆದರೆ ಮಾನವನಲ್ಲಿರುವ ಸ್ಮೃತಿಶಕ್ತಿ ಅತ್ಯದ್ಭುತವಾದುದು. ಸ್ಮೃತಿಯುಂಟಾಗುವುದು ಮಿದುಳಿನಲ್ಲಿ ಆಗುವ ವಿವಿಧ ಸಂಪರ್ಕಗಳಿಂದ. ಇಂತಹ ಅನಂತ ಸಂಪರ್ಕಗಳ ಸಾಧ್ಯತೆ ಮಾನವ ಮಿದುಳಿನಲ್ಲಿದೆಯಂತೆ. ಒಂದು ದೂರವಾಣಿ ಸಂಖ್ಯೆಯನ್ನು ನೆನಪಿಸಿಕೊಳ್ಳಲು ಸಾವಿರಾರು ನ್ಯೂರಾನುಗಳು ಕೆಲಸ ಮಾಡುತ್ತವಂತೆ. ಹೀಗೆ ನಾವು ನೋಡುವುದು, ಕೇಳುವುದು, ಮಾತನಾಡುವುದು, ಆಲೋಚಿಸುವುದು ಎಲ್ಲವೂ ನೆನಪಿನ ಶಕ್ತಿಯ ಆಧಾರದ ಮೇಲೆ. ಅಂದರೆ ನಿರಂತರವಾಗಿ ಮಿದುಳಿನಲ್ಲಿ ವಿವಿಧ ಸಂಪರ್ಕಗಳು ಮಿಂಚಿನ ವೇಗದಲ್ಲಿ ಆಗುತ್ತಿರಬೇಕು. ಈ ಕೆಲಸವನ್ನು ಮಾಡಲು ನಮ್ಮ ಮಿದುಳಿನಲ್ಲಿ ೧೦೦ ಬಿಲಿಯನ್ ನ್ಯೂರಾನುಗಳಿವೆಯಂತೆ, ಹಾಗೂ ಪ್ರತಿಯೊಂದು ನ್ಯೂರುನು ೧೦,೦೦೦ ಸಂಪರ್ಕಗಳನ್ನು, ಇತರ ಮಿದುಳು ಜೀವಕೋಶಗಳೊಡನೆ ಹೊಂದುವ ಸಾಮರ್ಥ್ಯವನ್ನು ಪಡೆದಿವೆಯಂತೆ!

ಒಬ್ಬನು ಹೆಚ್ಚು ಅಥವಾ ಕಡಮೆ ಜ್ಞಾನಿಯಾಗಿರುವುದು, ಅವನಲ್ಲಿ ಹೆಚ್ಚು ಅಥವಾ ಕಡಮೆ ಆಲೋಚನಾಶಕ್ತಿ ಇರುವುದು ಮಿದುಳಿನಲ್ಲಾಗುವ ಈ ವಿವಿಧ ಸಂಪರ್ಕಗಳನ್ನೇ ಅವಲಂಬಿಸಿರುತ್ತದೆ. ಪ್ರಕೃತಿಯು ಮಾನವನಿಗೆ ಏತಕ್ಕೆ ಇಷ್ಟೊಂದು ಸಾಮರ್ಥ್ಯವನ್ನು ನೀಡಿರುತ್ತದೆ? ಈ ಸಾಮರ್ಥ್ಯದಿಂದ ಅವನು ಸಾಧಿಸುತ್ತಿರುವುದೇನು? ಪ್ರಕೃತಿಯು ನೀಡಿರುವ ಈ ಪರಮಾದ್ಭುತ ಕಂಪ್ಯೂಟರ್ (ಮಿದುಳು)ನ ಸಹಾಯದಿಂದ ಅವನು ಅತ್ಯಂತ ಕಡಮೆ ಸಾಮರ್ಥ್ಯದ ಕಂಪ್ಯೂಟರ್‌ಗಳನ್ನು ತಯಾರಿಸಿ ತನ್ನ ಮಿದುಳಿನ ಕೆಲಸವನ್ನು ಅವುಗಳಿಗೆ ವಹಿಸುತ್ತಿರುವನು. ಇದೇನೂ ತಪ್ಪಲ್ಲ. ಆದರೆ ಅವನು ತನ್ನ ಜೀವನ ಸಾಫಲ್ಯವನ್ನು ಬುದ್ಧಿಶಕ್ತಿಗೂ ಮೀರಿದ ವಲಯದಲ್ಲಿ ಕಾಣಬೇಕಾಗಿದೆ. ಆ ಆಧ್ಯಾತ್ಮಿಕ ವಲಯದಲ್ಲಿ ಈ ಬುದ್ಧಿಶಕ್ತಿಗೆ ಪ್ರವೇಶವೇ ಇಲ್ಲ—ಈ ಅತ್ಯದ್ಭುತ ಮಾನವ ಕಂಪ್ಯೂಟರ್ (ಮಿದುಳು) ಅಲ್ಲಿ ನಿಷ್ಕ್ರಿಯವಾಗುತ್ತದೆ. ಪ್ರಕೃತಿ ಇಷ್ಟು ಲಕ್ಷ ವರ್ಷಗಳ ವಿಕಾಸದ ಮೂಲಕ ಸಾಧಿಸಿದ ಈ ಪವಾಡ ಅಲ್ಲಿ ಬೇಡವಾಗುತ್ತದೆ.

ಹಾಗಾದರೆ ಅದು ಎಷ್ಟು ಅದ್ಭುತವಾಗಿರಬೇಕು!